ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ವಿಶ್ವ ಹಿಂದೂ ಪರಿಷತ್ತಿನ ಕೇಂದ್ರದ ಸೂಚನೆಯಂತೆ ಬೆಂಗಳೂರಿನ ವಿ.ವಿ.ಪುರಂನಲ್ಲಿರುವ ವಾಸವಿ ವಿದ್ಯಾನಿಕೇತನ ಸಭಾಂಗಣದಲ್ಲಿ ಸಂತ ಮಾರ್ಗದರ್ಶಕ ಮಂಡಳಿಯ ಸಮಾವೇಶ ನಡೆಯಿತು. ಸಮಾವೇಶ ತೆಗೆದುಕೊಂಡ ನಿರ್ಣಯಗಳನ್ನು ಸಂತ ಸಮೂಹ ಮತ್ತು ವಿಶ್ವ ಹಿಂದೂ ಪರಿಷತ್ ಅಂತಾರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ರವರು ಕರ್ನಾಟಕ ರಾಜ್ಯದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ರವರನ್ನು ರಾಜಭವನದಲ್ಲಿ ಭೇಟಿ ಮಾಡಿ ಮನವಿಯನ್ನು ಸಲ್ಲಿಸಿದರು.

ಸಂಪುಟ : 46 | ಸಂಚಿಕೆ : 16 | ಕಾರ್ತಿಕ-ಮಾರ್ಗಶಿರ | ಕಲಿಯುಗಾಬ್ದ 5126 | 15-12-2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಬಾಂಗ್ಲಾದೇಶದಲ್ಲಿ ತಲ್ಲಣ – ಮುಂದುವರೆದ ಹಿಂದು ದಮನ

## ನಿಂತ ನೆಲ ಬಿಡದೇ ಒಗ್ಗಟ್ಟಾಗಿ ಪ್ರತಿರೋಧ ತೋರುತ್ತಿರುವ ಅಲ್ಪಸಂಖ್ಯಾತ ಹಿಂದುಸಮಾಜ

■ **ರಾಧಾಕೃಷ್ಣ ಹೊಳ್ಳ**

ಪ್ರತ್ಯೇಕ ಮುಸ್ಲಿಂ ದೇಶ ಬೇಕೆಂಬ ಒತ್ತಡಕ್ಕೆ ಅಂದಿನ ನಾಯಕರು ಬಗ್ಗಿದ ಪರಿಣಾಮ 1947ರಲ್ಲಿ ಪಾಕಿಸ್ತಾನ ಎಂಬ ಮುಸ್ಲಿಂ ದೇಶ ಹುಟ್ಟಿಕೊಂಡಿತು. ಇಂದಿನ ಬಾಂಗ್ಲಾದೇಶವೂ ಪಾಕಿಸ್ತಾನದಲ್ಲೇ ಇತ್ತು. ಆದರೂ, ಪೂರ್ವದಲ್ಲಿನ ಬಾಂಗ್ಲಾಕ್ಕೂ, ಪಶ್ಚಿಮದ ಸಿಂಧ್, ಪಂಜಾಬ್ ಮೊದಲಾದ ಭಾಗಗಳಿಗೂ ಸಾಂಸ್ಕೃತಿಕವಾಗಿಯೂ, ಭಾಷೆಯ ದೃಷ್ಟಿಯಿಂದಲೂ ತಾಳಮೇಳ ಹೊಂದಾಣಿಕೆಯಾಗುತ್ತಿರಲಿಲ್ಲ. ಹಾಗಾಗಿ, ಬಾಂಗ್ಲಾದಲ್ಲಿ ಪುನಃ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಯಿತು. 1971 ರಲ್ಲಿ ನಡೆದ ಬಾಂಗ್ಲಾ ಮುಕ್ತಿ ಆಂದೋಲನದಲ್ಲಿ ಹೋರಾಟಗಾರರನ್ನು ಬಗ್ಗುಬಡಿಯಲು ಪಾಕಿಸ್ತಾನ ಸೈನ್ಯಬಲ ಪ್ರಯೋಗಿಸಿದಾಗ, ಭಾರತ ರಣಕಣಕ್ಕಿಳಿದು ಪಾಕಿಸ್ತಾನವನ್ನು ಸೋಲಿಸಿ ಬಾಂಗ್ಲಾದೇಶ ಎನ್ನುವ ಹೊಸ ದೇಶದ ಉದಯಕ್ಕೆ ಕಾರಣವಾಯಿತು. ಹಾಗೆ ನೋಡಿದರೆ, ಭಾರತವೇ ಬಾಂಗ್ಲಾದೇಶದ ಜನಕ ಎನ್ನಲು ಅಡ್ಡಿಯಿಲ್ಲ.

### ಬಾಂಗ್ಲಾದಲ್ಲಿ ಹಿಂದು ದಮನದ ಇತಿಹಾಸ

ಈ ಆಂದೋಲನದ ಸಂದರ್ಭದಲ್ಲಿ ನಡೆದ ಹಿಂಸಾಚಾರದಲ್ಲಿ ಬಲಿಯಾದದ್ದು ಮಾತ್ರ ಹಿಂದುಗಳೇ. ಲಕ್ಷಾಂತರ ಹಿಂದುಗಳ ಮಾರಣಹೋಮ ಬಾಂಗ್ಲಾದಲ್ಲಿ ನಡೆಯಿತು. ಎಷ್ಟು ಹಿಂದು ಮನೆಗಳಿಗೆ ಬೆಂಕಿಯಿಟ್ಟರು, ಎಷ್ಟು ಹಿಂದು ಮಹಿಳೆಯರ ಮೇಲೆ ಅತ್ಯಾಚಾರವಾಯಿತು ಎಂಬುದರ ಲೆಕ್ಕವಿಟ್ಟವರು ಯಾರೂ ಇಲ್ಲ. ಆಗ ದೇಶ ಬಿಟ್ಟು ಬಂದ ಹಿಂದುಗಳಿಗೆ ಭಾರತ ಸಹಜ ಆಶ್ರಯತಾಣವಾಯಿತು. ಹಾಗೆ ಬಂದ ನಿರಾಶ್ರಿತ ಹಿಂದುಗಳ ಶಿಬಿರಗಳು ಭಾರತದಲ್ಲಿ ಅನೇಕ ಕಡೆ ಇವೆ. ನಮ್ಮ ಕರ್ನಾಟಕದ ಸಿಂಧನೂರಿನ ಬಳಿಯೂ ಅಂತಹ ನಿರಾಶ್ರಿತರ ಶಿಬಿರವಿದೆ. ಅಲ್ಲಿ ಈಗ ಇರುವವರ ಸಂಖ್ಯೆ 30,000 ದಷ್ಟು. ಅವರು ಅನುಭವಿಸಿದ ನರಕಯಾತನೆ ಕೇಳಿದರೆ, ಎಂತಹವರಿಗೂ ಕಣ್ಣೀರು ಬರದಿರದು! ಅಳಿದುಳಿದವರು ಹೇಳಿದ ಕಥೆ ಪ್ರಪಂಚಕ್ಕೆ ಗೊತ್ತಿದೆ ಅಷ್ಟೇ. ತಮ್ಮ ನೋವಿನ ಕಥೆಯೊಂದಿಗೇ ಮಣ್ಣಾಗಿ ಹೋದವರು ಅದೆಷ್ಟೋ ಮಂದಿ.

1951ರ ಜನಗಣತಿಯ ಪ್ರಕಾರ ಬಾಂಗ್ಲಾದೇಶದಲ್ಲಿದ್ದ ಹಿಂದುಗಳ ಜನಸಂಖ್ಯೆ ಶೇ. 22 ರಷ್ಟು. ಈಗ ಅಲ್ಲಿನ ಹಿಂದುಗಳ ಜನಸಂಖ್ಯೆ ಶೇ. 7 ಮಾತ್ರ ಎಂದರೆ, ಉಳಿದ ಹಿಂದುಗಳು ಎಲ್ಲಿ ಹೋದರು ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಬೇರೆ ಬೇರೆ ದೇಶಕ್ಕೆ ವಲಸೆ ಹೋದ ಹಿಂದುಗಳು ಕೆಲವರಾದರೆ, ಪ್ರತಿನಿತ್ಯ ಎಂಬಂತೆ ನಡೆದ ಹಿಂಸಾಚಾರಕ್ಕೆ ಬಲಿಯಾದವರು ಇನ್ನು ಕೆಲವರು. ಮುಸ್ಲಿಂ ದೇಶದಲ್ಲಿನ ಹಿಂದುಗಳ ದಯನೀಯ ಸ್ಥಿತಿ ತಮ್ಮ ಮಕ್ಕಳಿಗೆ ಬರದಿರಲಿ ಎಂಬ ಕಾರಣಕ್ಕೆ ಮಕ್ಕಳ ಸಂಖ್ಯೆಯನ್ನೇ ಹಿಂದುಗಳು ಕಡಿಮೆ ಮಾಡಿಕೊಂಡರೆ, ಮುಸ್ಲಿಮರು ಮಾತ್ರ ಎಗ್ಗಿಲ್ಲದೇ ತಮ್ಮ ಜನಸಂಖ್ಯೆಯನ್ನು ಹೆಚ್ಚಿಸುತ್ತಾ ಹೋದರು. ಸ್ವಾತಂತ್ರ್ಯ ಬಂದಲ್ಲಿಂದ ಇಲ್ಲಿಯವರೆಗೂ ಹಿಂದು ಮನೆಗಳ ಧ್ವಂಸ, ದೇವಾಲಯಗಳ ನಾಶ, ಅತ್ಯಾಚಾರಗಳು ಅವ್ಯಾಹತವಾಗಿ ನಡೆಯುತ್ತಲೇ ಇವೆ. ಇದಕ್ಕೆಲ್ಲ ಸರ್ಕಾರದ ಪರೋಕ್ಷ ಬೆಂಬಲವಿದ್ದದ್ದರಿಂದ ಹಿಂದುಗಳ ಪರಿಸ್ಥಿತಿ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಲೇ ಬಂದಿದೆ.




### ಮತ್ತೆ ನಡೆದಿದೆ ಹಿಂದು ಹತ್ಯಾಕಾಂಡ

ಈಗ ಮತ್ತೆ ಬಾಂಗ್ಲಾದೇಶ ಸುದ್ದಿಯಲ್ಲಿರುವುದು ಅಲ್ಲಿ ಉಂಟಾಗಿರುವ ಅರಾಜಕತೆಯಿಂದ. 1971 ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ಸರ್ಕಾರ ಮೀಸಲಾತಿ ಕೊಡುತ್ತಿತ್ತು. ಅವರ ಮಕ್ಕಳು ಮೊಮ್ಮಕ್ಕಳಿಗೂ ಇದು ವಿಸ್ತರಿಸಿತು. ಈ ವಿಷಯವಾಗಿ ನಡೆದ ಆಂದೋಲನವು ಪ್ರಧಾನಿ ಶೇಕ್ ಹಸೀನಾ ರಾಜೀನಾಮೆ ಕೊಟ್ಟು ಜೀವ ಉಳಿಸಿಕೊಳ್ಳಲು ಭಾರತಕ್ಕೆ ಬಂದು ಆಶ್ರಯ ಪಡೆಯುವವರೆಗೂ ಬಂದು ನಿಂತಿತು. ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಅಲ್ಲಿನ ಸಾಮಾಜಿಕ ನಾಯಕ ಮೊಹಮದ್ ಯೂನಸ್ ಅವರ ನೇತೃತ್ವದ ತಾತ್ಕಾಲಿಕ ಸರ್ಕಾರ ಅಲ್ಲಿ ಈಗ ನಡೆಯುತ್ತಿದೆ. ಸರ್ಕಾರದಲ್ಲಿ ಅವರಿದ್ದರೂ ಅಲ್ಲಿ ನಡೆಯುತ್ತಿರುವ ಕಾರುಬಾರು ಮುಸ್ಲಿಂ ಮೂಲಭೂತವಾದಿಗಳದ್ದೇ. ಬಾಂಗ್ಲಾದ ಜನಕ ಎಂಬ ಬಿರುದು ಪಡೆದ ಮೊದಲ ಅಧ್ಯಕ್ಷ ಮುಜೀಬುರ್ ರೆಹಮಾನ್ ಅವರ ಪ್ರತಿಮೆಯನ್ನು ಮುಸ್ಲಿಂ ಮತಾಂಧರು ಧ್ವಂಸ ಮಾಡಿದರು. ದೇಶದೆಲ್ಲೆಡೆ ಅನೇಕ ಪ್ರತಿಮೆಗಳನ್ನೂ, ಚಿತ್ರಗಳುಳ್ಳ ಗೋಡೆಗಳನ್ನೂ ನಾಶ ಮಾಡಲಾಯಿತು. ಸಂಗೀತಜ್ಞ ರಾಹುಲ್ ಆನಂದ್ ಅವರ 140 ವರ್ಷ ಹಳೆಯ ಮನೆಯ ಮೇಲೆ ಧಾಳಿ ನಡೆಯಿತು. ಅವರು ಸಂಗ್ರಹಿಸಿಟ್ಟಿದ್ದ 3,000 ಕ್ಕೂ ಹೆಚ್ಚು ಸಂಗೀತ ಉಪಕರಣಗಳಿಗೆ ಬೆಂಕಿಯಿಟ್ಟರು. ಇಸ್ಲಾಮಿನಲ್ಲಿ ಪ್ರತಿಮೆಗಳಿಗೂ, ಸಂಗೀತಕ್ಕೂ ನಿಷೇಧವಿದೆಯಲ್ಲ, ಅದಕ್ಕೇ ಇವು ಇರಬಾರದು ಎಂಬಷ್ಟು ಮತಾಂಧತೆ! ಸುಮಾರು 500 ಕ್ಕೂ ಹೆಚ್ಚು ಕಡೆ ಹಿಂದುಗಳ ಮೇಲೆ ಧಾಳಿ, ನೂರಾರು ದೇವಸ್ಥಾನಗಳ ನಾಶ, ನೂರಾರು ತಾಯಂದಿರ ಮೇಲೆ ಅತ್ಯಾಚಾರ, ಸಾವಿರಕ್ಕೂ ಹೆಚ್ಚು ಹಿಂದುಗಳ ಕೊಲೆ ನಡೆದಿದೆ. ಹಿಂದುಗಳಿಗೂ ಅಲ್ಲಿನ ಹೋರಾಟಕ್ಕೂ ಯಾವ ಸಂಬಂಧವೂ ಇಲ್ಲದಿದ್ದರೂ ಮುಸ್ಲಿಮರ ಸಿಟ್ಟಿಗೆ ಬಲಿಯಾದವರು ಮಾತ್ರ ಹಿಂದುಗಳು. ಡ್ಯಾನಿಶ್ ಪತ್ರಿಕೆಯೊಂದು ಪ್ರವಾದಿ ಮೊಹಮದ್ ಮೇಲಿನ ವ್ಯಂಗಚಿತ್ರ ಪ್ರಕಟಿಸಿದಾಗ ಬೆಂಗಳೂರಿನಲ್ಲಿ ಕಲ್ಲು ತೂರಾಟ ನಡೆದು ಹಿಂದುಗಳ ಮೇಲೆ ಧಾಳಿ ನಡೆಯಲಿಲ್ಲವೇ? ಯಾರ ಮೇಲೆ ಸಿಟ್ಟು ಬಂದರೂ ಆಕ್ರಮಣ ಮಾಡುವುದು ಮಾತ್ರ ಕಾಫಿರರ ಮೇಲೆಯೇ.

ಯಾವ ಪಾಕಿಸ್ತಾನದ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಪಡೆದಿದ್ದರೋ ಅದೇ ಪಾಕಿಸ್ತಾನದ ಪರ ಒಲವು ಈಗ ಬಾಂಗ್ಲಾದಲ್ಲಿ ಜಾಸ್ತಿಯಾಗುತ್ತಿದೆ! ಬಾಂಗ್ಲಾದೇಶವನ್ನು ಇಸ್ಲಾಮಿಕ್ ದೇಶವೆಂದು ಘೋಷಿಸಬೇಕೆಂಬ ಬೇಡಿಕೆ ಶುರುವಾಗಿದೆ. ಅಷ್ಟೇ ಅಲ್ಲ, ಅದು ಆದರೂ ಆಗದಿದ್ದರೂ ಅಲ್ಲಿನ ಹಿಂದುಗಳ ತಲೆಯ ಮೇಲಂತೂ ತೂಗುಗತ್ತಿ ಇದ್ದದ್ದೇ. ಇಷ್ಟು ವರ್ಷಗಳ ಕಾಲ ಎಲ್ಲವನ್ನೂ ಸಹಿಸಿಕೊಂಡಿದ್ದ ಹಿಂದುಗಳು ಮೊನ್ನೆ ಆಗಸ್ಟ್‌ನಲ್ಲಿ ಹಿಂಸಾಚಾರ ಜಾಸ್ತಿಯಾದಾಗ ಬೀದಿಗಿಳಿದು ಪ್ರತಿಭಟಿಸಿದರು. ಢಾಕಾದಲ್ಲಿ ಸುಮಾರು 3 ಲಕ್ಷಕ್ಕೂ ಹೆಚ್ಚು ಜನ ಸೇರಿದ್ದರು.

### ಹಿಂದು ಸಂನ್ಯಾಸಿ ಚಿನ್ಮಯ ಕೃಷ್ಣದಾಸರ ಬಂಧನ

ಮೊನ್ನೆ ಮೊನ್ನೆ ಅಲ್ಲಿನ ಹಿಂದು ಸಮಾಜಕ್ಕೆ ನೇತೃತ್ವ ಕೊಡುತ್ತಿದ್ದ ಇಸ್ಕಾನ್‌ನ ಪ್ರಭು ಚಿನ್ಮಯ ಕೃಷ್ಣದಾಸ ಅವರನ್ನು ಏಕಾಏಕಿ ಬಂಧಿಸಲಾಗಿದೆ. ಒಂದು ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಕ್ಕಿಂತ ಭಗವಾಧ್ವಜವನ್ನು ಎತ್ತರಕ್ಕೆ ಹಾರಿಸಿದ್ದರೆಂಬ ದೇಶದ್ರೋಹದ ಆಪಾದನೆಯನ್ನು ಅವರ ಮೇಲೆ ಹೊರಿಸಲಾಗಿದೆ. ಅವರ ಪರವಾಗಿ ನ್ಯಾಯಾಲಯದಲ್ಲಿ ವಾದ ಮಾಡಲು ಬರದಂತೆ ವಕೀಲರಿಗೆ ಬೆದರಿಕೆ ಹಾಕಲಾಗಿದೆ. ಹಾಗಾಗಿ, ಅವರಿಗೆ ಇನ್ನೂ ಜಾಮೀನು ಸಿಕ್ಕಿಲ್ಲ. ಕೊರೋನಾ ಕಾಲದಲ್ಲಿ ಸಾವಿರಾರು ಜನರಿಗೆ ನಿತ್ಯ ಅನ್ನದಾನ ಮಾಡಿದ ಸಂನ್ಯಾಸಿ ಇವರು. ವಿಪರ್ಯಾಸವೆಂದರೆ, ಯಾರು ಅಂದು ಇಸ್ಕಾನ್‌ನ ಊಟ ಮಾಡಿದ್ದರೋ ಅವರೇ ಇಂದು ಇಸ್ಕಾನ್ ನಿಷೇಧ ಮಾಡಿ ಎಂಬ ಬೇಡಿಕೆಯಿಡುತ್ತಿದ್ದಾರೆ. ಕಾಫಿರನೊಬ್ಬ ಎಷ್ಟೇ ಸಹಾಯ ಮಾಡಿರಲಿ, ಜೀವ ಉಳಿಸಿರಲಿ, ಆತ ಎಂದಿಗೂ ಕಾಫಿರನೇ. ಆತನೊಂದಿಗೆ ಯಾವ ಕರುಣೆ, ಸ್ನೇಹವೂ ಸಲ್ಲ ಎಂಬ ಇಸ್ಲಾಮಿನ ಸಿದ್ಧಾಂತವನ್ನು ಈ ಮತಾಂಧರು ಪದೇ ಪದೇ ಸಾಬೀತುಪಡಿಸುತ್ತಿದ್ದಾರೆ! 1990ರ ಕಾಶ್ಮೀರ ಕಣಿವೆಯಲ್ಲಿ ಹಿಂದುಗಳ ಮಾರಣಹೋಮ ನಡೆಸಿದವರೂ ಎಲ್ಲಿಂದಲೋ ಬಂದವರಲ್ಲ. ಪಕ್ಕದ ಮನೆಯ ಮುಸ್ಲಿಮರೇ, ಸ್ನೇಹಿತರಂತೆ ಇದ್ದವರೇ!

### ಬಾಂಗ್ಲಾ ಹಿಂದುಗಳಿಗೆ ಬೇಕಿದೆ ಎಲ್ಲರ ಬೆಂಬಲ

ಇಂದು ಬಾಂಗ್ಲಾದ ಹಿಂದುಗಳು ತಮ್ಮ ಜಾಗ ಬಿಡದೇ ಮಾಡು ಇಲ್ಲವೇ ಮಡಿ ಎಂಬಂತೆ ಹೋರಾಟ ಮಾಡಲು ನಿರ್ಧರಿಸಿದ್ದಾರೆ. ತಮ್ಮ ದೇವಾಲಯಗಳನ್ನು ರಾತ್ರಿ ಹಗಲೆನ್ನದೇ ಕಾಯುತ್ತಿದ್ದಾರೆ, ಗ್ರಾಮಗಳಲ್ಲಿ ಯುವಕರ ಪಹರೆಯಿದೆ. ಈ ಸಂದರ್ಭದಲ್ಲಿ ನಾವೆಲ್ಲರೂ ಅವರೊಂದಿಗೆ ನಿಲ್ಲಬೇಕಿದೆ. ಬಾಂಗ್ಲಾ ಅಲ್ಪಸಂಖ್ಯಾತರಾದ ಹಿಂದೂ ಬೌದ್ಧ ಕ್ರಿಶ್ಚಿಯನ್ನರ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ವಿಶ್ವದೆಲ್ಲೆಡೆಯಿಂದ ಬಾಂಗ್ಲಾ ಸರ್ಕಾರದ ಮೇಲೆ ಒತ್ತಡ ಬರುತ್ತಿದೆ. ನಮ್ಮ ಬೆಂಬಲ ಅವರಿಗೆ ನೈತಿಕ ಸ್ಥೈರ್ಯವನ್ನು ಕೊಡಲಿದೆ. ಪರಿಸ್ಥಿತಿಯನ್ನು ಎದುರಿಸಲು ಬಲ ತುಂಬಲಿದೆ. ■

## ನಾಮಶೂದ್ರ ಎಂಬ ನತದೃಷ್ಟ ಸಮಾಜ

ಬಾಂಗ್ಲಾದಲ್ಲಿರುವ ಹಿಂದುಗಳಲ್ಲಿ ಹೆಚ್ಚಿನವರು ನಾಮಶೂದ್ರ ಎಂಬ ಪರಿಶಿಷ್ಟ ಜಾತಿಯವರು, ಅವರಲ್ಲಿ ಹೆಚ್ಚಿನವರು ಕೂಲಿ ಕಾರ್ಮಿಕರು, ಕೃಷಿಕರು, ಮೀನುಗಾರರು. ಶ್ರೀಮಂತರು ಎಂದು ಹೇಳಬಹುದಾದವರು ಎಲ್ಲೋ ಕೆಲವು ಮಂದಿ ಮಾತ್ರ. 1906ರಲ್ಲಿ ಬಂಗಾಳ ವಿಭಜನೆಯಾದಾಗ ಮೇಲ್ವರ್ಗದ ಹೆಚ್ಚಿನವರು ಈಗ ಭಾರತದಲ್ಲಿರುವ ಬಂಗಾಳಕ್ಕೆ ವಲಸೆ ಬಂದುಬಿಟ್ಟರು. ಅಷ್ಟೇನೂ ವಿದ್ಯಾವಂತರಲ್ಲದ, ಪ್ರಪಂಚದ ಆಗುಹೋಗುಗಳ ಬಗ್ಗೆ ಹೆಚ್ಚು ಅರಿವು ಇಲ್ಲದ ಮುಗ್ಧ ಸಮಾಜ ಮಾತ್ರ ಅಲ್ಲೇ ಉಳಿದುಬಿಟ್ಟಿತು. ಹಾಗೆಯೇ, ಪಾಕಿಸ್ತಾನದ ಮೊದಲ ಕಾನೂನು ಮಂತ್ರಿಯಾಗಿದ್ದ ಜೋಗೇಂದ್ರನಾಥ ಮಂಡಲ್ ಅವರೂ ಇದೇ ನಾಮಶೂದ್ರ ಸಮಾಜಕ್ಕೆ ಸೇರಿದವರು. ಪಾಕಿಸ್ತಾನ ಸೆಕ್ಯುಲರ್ ದೇಶವಾಗಿ ಉಳಿಯಲಿದೆ ಎಂಬ ಆಶಯದಿಂದ ಅಲ್ಲೇ ಉಳಿದು ಸರ್ಕಾರದಲ್ಲಿ ಮಂತ್ರಿಯಾದ ಕೆಲವೇ ದಿನಗಳಲ್ಲಿ ಅವರಿಗೆ ನಿಜಸ್ಥಿತಿಯ ಅರಿವಾಗತೊಡಗಿತು. ಎಲ್ಲೆಡೆ ಹಿಂದುಗಳ ಮೇಲೆ ಹಿಂಸಾಚಾರ ನಡೆಯುತ್ತಿತ್ತು. ಅದರಲ್ಲಿ ಪೆಟ್ಟು ತಿಂದಿದ್ದು ಈ ತಳಸಮುದಾಯದವರೇ! ಸರ್ಕಾರದ ಅಧಿಕಾರಿಗಳು, ಪೊಲೀಸರೇ ಮತಾಂಧರ ಜತೆ ಕೈಜೋಡಿಸಿ ಹಿಂದೂದಮನ ಮಾಡುತ್ತಿರುವುದನ್ನು ನೋಡಿದ ಅವರು ಅನುಭವಿಸಿದ ವ್ಯಥೆ ಅಷ್ಟಿಷ್ಟಲ್ಲ. ಸರ್ಕಾರಕ್ಕೆ ಪತ್ರ ಬರೆದರು, ಅಧಿಕಾರಿಗಳನ್ನು ಭೇಟಿ ಮಾಡಿ ಹಿಂದುಗಳ ರಕ್ಷಣೆಗೆ ಆಗ್ರಹಿಸಿದರು. ಯಾವುದೂ ಫಲ ನೀಡಲಿಲ್ಲ, ಕೊನೆಗೆ ಕಾನೂನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಕೊಲ್ಕತ್ತಾಕ್ಕೆ ಬಂದು ನೆಲೆಸಿದರು. ತನ್ನ ಜನರನ್ನು ರಕ್ಷಿಸಲಾಗಲಿಲ್ಲ ಎಂಬ ನೋವು ಮಾತ್ರ ಅವರನ್ನು ಕೊನೆಯವರೆಗೆ ಕಾಡುತ್ತಲೇ ಇತ್ತು.

## ಸಂಸ್ಮರಣೆ — ಗೋವಾ ವಿಮೋಚನಾ ದಿನ – ಡಿಸೆಂಬರ್ 19

ಗೋವಾ ವಿಮೋಚನೆಯು ಇತಿಹಾಸದ ಪ್ರಮುಖ ಘಟನೆಗಳಲ್ಲೊಂದು. ಪೋರ್ಚುಗೀಸರ ಪ್ರಭುತ್ವದಲ್ಲಿದ್ದ ಗೋವಾವನ್ನು ಭಾರತೀಯ ನೌಕಾಪಡೆಯ ಸಾಹಸದೊಂದಿಗೆ ಬಿಡುಗಡೆಗೊಳಿಸಿದ ದಿನ. ಹೀಗಾಗಿ ಪ್ರತಿ ವರ್ಷ ಈ ಶೌರ್ಯ ಮೆರೆದ ದಿನದ ಸ್ಮರಣೆಗಾಗಿ ಡಿಸೆಂಬರ್ 19ರಂದು ಗೋವಾ ವಿಮೋಚನೆ ದಿನವನ್ನಾಗಿ ಆಚರಿಸಲಾಗುತ್ತದೆ.

ಭಾರತವು ಬ್ರಿಟಿಷರ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದ ನಂತರ ಗೋವಾ ಸ್ವತಂತ್ರವಾಗಲು 14 ವರ್ಷಗಳನ್ನು ತೆಗೆದುಕೊಂಡಿತು. 1946ರ ಜೂನ್ 18ರಂದು ಡಾ.ರಾಮ್ ಮನೋಹರ್ ಲೋಹಿಯಾ ಅವರು ಗೋವಾ ವಿಮೋಚನಾ ಚಳುವಳಿಯ ನೇತೃತ್ವವಹಿಸಿದರು. ಸ್ವಾತಂತ್ರ್ಯ ನಂತರವೂ ವಿದೇಶಿಗರ ಕಪಿಮುಷ್ಟಿಯಲ್ಲಿದ್ದ ಗೋವಾವನ್ನು ಹಲವು ಹಂತದ ಸಂಧಿ ಮಾತುಕತೆಗಳ ಮೂಲಕ, ಪ್ರತಿಭಟನೆ, ಹೋರಾಟಗಳ ಮೂಲಕ ಸ್ವದೇಶಕ್ಕೆ ಮರಳಿ ಸೇರಿಸಿಕೊಳ್ಳುವ ಪ್ರಯತ್ನಗಳು ನಡೆದವು. ಡಿಸೆಂಬರ್ 19, 1961ರಂದು ಸಶಸ್ತ್ರ ಪಡೆಗಳ ಶೌರ್ಯದ ಕಾರಣ ಪೋರ್ಚುಗೀಸರು ಶರಣಾಗಿದ್ದು, ರಾಜ್ಯವನ್ನು ಮುಕ್ತಗೊಳಿಸಲಾಯಿತು. ಇದರ ಪರಿಣಾಮವಾಗಿ, ಗೋವಾ, ದಮನ್ ಮತ್ತು ದಿಯು ಭಾರತದ ಕೇಂದ್ರಾಡಳಿತ ಪ್ರದೇಶಗಳಾದವು. ಗೋವಾ 1987 ರವರೆಗೆ ಕೇಂದ್ರಾಡಳಿತ ಪ್ರದೇಶವಾಗಿ ಮುಂದುವರಿಯಿತು. ನಂತರ ಭಾರತದ 25ನೇ ರಾಜ್ಯವಾಗುವ ಮೂಲಕ ಗೋವಾಕ್ಕೆ ರಾಜ್ಯದ ಸ್ಥಾನಮಾನವನ್ನು ನೀಡಲಾಯಿತು.

**ಗೋವಾ ಸ್ವಾತಂತ್ರ್ಯ ಹೋರಾಟ:** ಬ್ರಿಟಿಷರು ಭಾರತ ಬಿಟ್ಟು ಹೋದರೂ ಪೋರ್ಚುಗೀಸರು ಭಾರತ ಬಿಡಲಿಲ್ಲ. ಗೋವಾದಿಂದ ಪೋರ್ಚುಗೀಸರನ್ನು ಅವರ ಮಾತೃ ದೇಶಕ್ಕೆ ಕಳುಹಿಸಲು ಸಾಕಷ್ಟು ಹೋರಾಟಗಳು ನಡೆದಿದ್ದವು. ದಮನ್ ದಿಯು, ಅಂಜದೀಪ್ ಪ್ರದೇಶಗಳೂ ಇವರ ವಶದಲ್ಲಿತ್ತು. ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಬಳಿಕ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರು ಪೋರ್ಚುಗಲ್ ಜತೆ ಹಲವು ಸಂಧಾನ ಸಭೆಗಳನ್ನು ನಡೆಸಿದ್ದರು. ಆದರೆ, ಪೋರ್ಚುಗೀಸರು ಇಂತಹ ಸಭೆಗಳಿಗೆ ಮಣಿಯಲಿಲ್ಲ. ಅಂತಿಮವಾಗಿ ಮಿಲಿಟರಿ ಕಾರ್ಯಾಚರಣೆ ಮೂಲಕ ಗೋವಾವನ್ನು ವಶಪಡಿಸಿಕೊಳ್ಳಲು ಭಾರತ ಮುಂದಾಯಿತು.

**ಆಪರೇಷನ್ ವಿಜಯ್:** ಗೋವಾದಲ್ಲಿ ಪೋರ್ಚುಗೀಸರ ಸೇನೆಯಲ್ಲಿ 3,300 ಸೈನಿಕರಿದ್ದರು. ಪೋರ್ಚುಗೀಸರ ವಿರುದ್ಧ ಭಾರತ ಆಪರೇಷನ್ ವಿಜಯ್ ನಡೆಸಿತ್ತು. ಭೂಸೇನೆ, ನೌಕಾಪಡೆ, ವಾಯುಪಡೆ ಒಟ್ಟಾಗಿ ಗೋವಾದಲ್ಲಿದ್ದ ಪೋರ್ಚುಗೀಸರ ವಿರುದ್ಧ ಯುದ್ಧ ಸಾರಿತ್ತು. ಭಾರತದ ಸೇನೆಯನ್ನು ಎದುರಿಸುವ ಸೇನಾ ಶಕ್ತಿ ಅವರಿಗೆ ಇರಲಿಲ್ಲ. ನಂತರ ಗವರ್ನರ್ ಜನರಲ್ ಮ್ಯಾನುಯಲ್ ಆಂಟೋನಿಯೋ ವಾಸಲೋ–ಇ–ಸಿಲ್ವಾ ಅವರು ಭಾರತಕ್ಕೆ ಶರಣಾದರು. ಡಿಸೆಂಬರ್ 18ರಂದು ಪೋರ್ಚುಗೀಸ್ ಧ್ವಜವನ್ನು ಇಳಿಸಿ ಶಾಂತಿಯ ಕುರುಹಾಗಿ ಬಿಳಿ ಬಾವುಟ ಹಾರಿಸಲಾಯಿತು. ಮರುದಿನ ಅಂದರೆ, ಡಿಸೆಂಬರ್ 19ರಂದು ಭಾರತದ ರಾಷ್ಟ್ರಧ್ವಜವನ್ನು ಹಾರಿಸಿ ಗೋವಾವನ್ನು ಅಧಿಕೃತವಾಗಿ ಭಾರತಕ್ಕೆ ಸೇರಿಸಲಾಯಿತು.

**ಗೋವಾ ವಿಮೋಚನೆಯಲ್ಲಿ ಆರ್ ಎಸ್ ಎಸ್ ಪಾತ್ರ:** ಜೂನ್ 13, 1955 ರಂದು, ಕರ್ನಾಟಕದ ಆರ್‌ಎಸ್‌ಎಸ್ ಸ್ವಯಂಸೇವಕರೊಂದಿಗೆ ಭಾರತೀಯ ಜನಸಂಘದ ನಾಯಕ ಜಗನ್ನಾಥ ರಾವ್ ಜೋಶಿ ಗೋವಾ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಜೋಶಿ ಅವರೊಂದಿಗೆ ಮಹಿಳೆಯರು ಸೇರಿದಂತೆ ಸುಮಾರು 3,000 ಕಾರ್ಮಿಕರ ತಂಡವಿತ್ತು. ಆಗಸ್ಟ್ 15, 1955ರಂದು, ಗೋವಾದಲ್ಲಿ ನಿಯೋಜಿಸಲಾಗಿದ್ದ ಪೋರ್ಚುಗೀಸ್ ಸೇನೆಯು 5,000ಕ್ಕೂ ಹೆಚ್ಚು ಸತ್ಯಾಗ್ರಹಿಗಳ ಮೇಲೆ ಗುಂಡಿನ ದಾಳಿ ನಡೆಸಿತು, ಸುಮಾರು 51 ಜನರನ್ನು ಕೊಂದಿತು. ಇಂತಹ ಅನೇಕ ಚಳವಳಿಗಳು 1961ರವರೆಗೆ ಮುಂದುವರೆಯಿತು. ಸಂಗೀತಗಾರ ಮತ್ತು ಗೋವಾ ಚಳವಳಿಯ ಪ್ರಮುಖ ಸ್ವಯಂಸೇವಕ ಸುಧೀರ್ ಫಡ್ಕೆ 'ಬಾಬೂಜಿ' ಸಾಂಸ್ಕೃತಿಕ ನೆಲೆಯಲ್ಲಿ ಸಹಾಯ ಮಾಡಿದರು. ರಾಷ್ಟ್ರ ಸೇವಿಕಾ ಸಮಿತಿಯು ಸರಸ್ವತಿ ಆಪ್ಟೆ 'ತಾಯಿ' ನೇತೃತ್ವದ ತಂಡ ಗೋವಾ ವಿಮೋಚನಾ ಚಳವಳಿಯಲ್ಲಿ ಭಾಗವಹಿಸಿತು ಮತ್ತು ಪುಣೆಯಲ್ಲಿ ಒಟ್ಟುಗೂಡಿದ ಎಲ್ಲಾ ಸತ್ಯಾಗ್ರಹಿ ಗುಂಪುಗಳಿಗೆ ಆಹಾರ ಇತ್ಯಾದಿಗಳನ್ನು ಏರ್ಪಡಿಸಿತು. ಜನಸಂಘದ ಸತ್ಯಾಗ್ರಹಿಗಳ ಸಂಖ್ಯೆಯು ಇತರ ಎಲ್ಲಾ ಪಕ್ಷಗಳ ಸಂಯೋಜಿತ ಪ್ರತಿಭಟನಾಕಾರರ ಸಂಖ್ಯೆಗಿಂತ ಸುಮಾರು ನಾಲ್ಕು ಪಟ್ಟು ಹೆಚ್ಚು ಪಾಲ್ಗೊಂಡಿತ್ತು ಎನ್ನುವುದನ್ನು ಹಲವು ದಾಖಲೆಗಳು ತಿಳಿಸುತ್ತವೆ.

**ಯುದ್ಧ ಸ್ಮಾರಕ:** ಕಾರ್ಯಾಚರಣೆ ಪ್ರಾರಂಭವಾಗಿ ಮೂರು ದಿನಗಳ ನಂತರ ಗೋವಾ ಭಾರತದ ವಶವಾಯಿತು. ಕೇವಲ 36 ಗಂಟೆಗಳ ಯುದ್ಧ ನಡೆದಿತ್ತು. ಈ ಯುದ್ಧದಲ್ಲಿ ಭಾರತದ ಸುಮಾರು 22 ಸೈನಿಕರು ಹುತಾತ್ಮರಾಗಿದ್ದರು. ಕೆಲವು ಸಿಬ್ಬಂದಿಗಳೂ ಬಲಿದಾನ ಗೈದಿದ್ದಾರೆ. ಇವರ ಸ್ಮರಣೆಗಾಗಿ ಗೋವಾದಲ್ಲಿ ಯುದ್ಧ ಸ್ಮಾರಕ ರಚಿಸಲಾಗಿದೆ. ಇಂದು ಗೋವಾ ವಿಮೋಚನೆಗಾಗಿ ಬಲಿದಾನಗೈದ ಎಲ್ಲರಿಗೂ ಇಲ್ಲಿ ಗೌರವ ನಮನ ಸಲ್ಲಿಸಲಾಗುತ್ತದೆ.

## ಅನುಪಮ ಸೇವೆಗೈಯುತ್ತಿರುವ ದಿವ್ಯ ಪ್ರೇಮದ ಸೇವಾಮಿಶನ್

ಅಂದು ಹರಿದ್ವಾರದ ಚಂಡೀಘಾಟ್‌ನಲ್ಲಿ ಪುಣ್ಯಸ್ನಾನಕ್ಕೆಂದು ನೆರೆದಿದ್ದವರ ಪೈಕಿ ಯುವಕನೊಬ್ಬ ಚಿಂತಿತನಾಗಿದ್ದ. ಎದುರಿನಲ್ಲಿ ಹರಿಯುತ್ತಿದ್ದ ಪ್ರವಾಹ ಆತನಿಗೆ ಅಲಕನಂದಾಳ ಕಣ್ಣೀರಕೋಡಿಯಂತೆ ಕಾಣಿಸುತ್ತಿತ್ತು. ಆ ಪುಣ್ಯತಟದಲ್ಲಿ ಭಿಕ್ಷೆ ಬೇಡುತ್ತಿದ್ದ ಕೆಲ ಕುಷ್ಠರೋಗಿಗಳ ಯಾತನೆಗೆ ನೊಂದ ನದಿ ಕಂಬನಿಗರೆಯುತ್ತಿದ್ದಂತೆ ಆತನಿಗೆ ಭಾಸವಾಗುತ್ತಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಆ ಯುವ ಪ್ರಚಾರಕನಿಗೆ ತಾಳಲಾಗಲಿಲ್ಲ. ಅಕ್ಟೋಬರ್ 1996ರ ರಾತ್ರಿ ಹರಿದ್ವಾರದ ಚಂಡೀಘಾಟ್‌ನಲ್ಲಿ ಅಂದು ಕಳೆದ ಇರುಳು ಆ ಯುವಕ ಆಶೀಶ್ ಗೌತಮನ ಬದುಕಿನ ದಾರಿಯನ್ನೇ ಬದಲಿಸಿ ಅದೇ ಆತನ ಕಾರ್ಯಕ್ಷೇತ್ರವಾಯಿತು.



ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರದ ಸ್ನಾತಕೋತ್ತರ ಪದವಿ ಹಾಗೂ ಎಲ್.ಎಲ್.ಬಿ.ಗಳನ್ನು ಪೂರೈಸಿದ ಆಶೀಶರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾದರು. 1988 ರಿಂದ 1996ರ ತನಕ 8 ವರ್ಷಗಳ ಕಾಲ ಪ್ರಚಾರಕರಾಗಿದ್ದ ಅವರು, ದೈವಸಾಕ್ಷಾತ್ಕಾರಕ್ಕೆ ಹಂಬಲಿಸಿ, ಹಿಮಾಲಯದ ದುರ್ಗಮ ಕಣಿವೆಗಳಿಗೆ ಹೋದರು. ಆ ಸಮಯದಲ್ಲಿ ತಮ್ಮನ್ನು ಕಾಣಲು ಬಂದ ಕೆಲ ಸ್ವಯಂಸೇವಕ ಬಂಧುಗಳನ್ನು ಬೀಳ್ಕೊಡಲು ಹರಿದ್ವಾರಕ್ಕೆ ಬಂದ ಆಶೀಶರು, ಅಲ್ಲಿನ ಚಂಡೀಘಾಟ್‌ನ ಧರ್ಮಛತ್ರದಲ್ಲಿ ತಂಗಿದ್ದೇ ಮಹತ್ತರ ತಿರುವಿಗೆ ಕಾರಣವಾಯಿತು. ಮಾನವನ ಸೇವೆಯೇ ಮಾಧವನ ಸೇವೆಯೆಂಬಂತೆ ಆಶೀಶರು, ಆ ಕುಷ್ಠರೋಗಿಗಳಲ್ಲಿಯೇ ಪರಮಾತ್ಮನನ್ನು ಕಂಡರು. ಕುಷ್ಠರೋಗವನ್ನು ಸಾಂಕ್ರಾಮಿಕವೆಂದು ಭಾವಿಸಲಾಗಿದ್ದ ಅವಧಿಯಲ್ಲಿ, ಕುಷ್ಠರೋಗಿಗಳಿಗಾಗಿಯೇ ತಮ್ಮ ಬದುಕನ್ನು ಮೀಸಲಾಗಿರಿಸಿದರು.

ಕುಷ್ಠರೋಗಿಗಳೊಂದಿಗೆ ಅವರ ಮಕ್ಕಳನ್ನೂ ಅಸ್ಪೃಶ್ಯರಂತೆ ಕಾಣಲಾಗುತ್ತಿದ್ದ ಆ ಕಾಲದಲ್ಲಿ ತಮ್ಮ ಮಕ್ಕಳನ್ನು ಕ್ರಿಶ್ಚಿಯನ್ ಮಿಷನರಿಗಳ ವಶಕ್ಕೆ ಒಪ್ಪಿಸುವ ಅನಿವಾರ್ಯತೆ ಕುಷ್ಠರೋಗಿಗಳದ್ದಾಗಿತ್ತು. ಆದರೆ ಅಂಥ ಮಕ್ಕಳ ಬದುಕನ್ನು ರೂಪಿಸುವ ಹೊಣೆಯನ್ನು ಮಿಷನರಿಗಳೂ ನಿಭಾಯಿಸಲಿಲ್ಲ. ಆಗ 15 ಮಕ್ಕಳಿಗಾಗಿ ಆರಂಭವಾದ ವಂದೇಮಾತರಂ ಕುಂಜವು ಕಳೆದ 23 ವರ್ಷಗಳಲ್ಲಿ ಅಂಥ ನೂರಾರು ಮಕ್ಕಳಿಗೆ ಶಿಕ್ಷಣ–ಸಂಸ್ಕಾರ ನೀಡುವ ಮೂಲಕ ಅವರೆಲ್ಲರ ಉಜ್ವಲ ಭವಿಷ್ಯಕ್ಕೆ ದಾರಿದೀಪವಾಗಿದೆ. ಇಲ್ಲಿ ಶಿಕ್ಷಣ ಸಂಸ್ಕಾರಗಳ ಜೊತೆಗೆ ದೇಶದ ಉತ್ತಮ ಪ್ರಜೆಗಳಾಗುವಂತೆ ಮಕ್ಕಳನ್ನು ಪ್ರೇರೇಪಿಸಲಾಗುತ್ತದೆ.

ಕುಷ್ಠರೋಗಿಗಳಿಗೆಂದೇ ಆರಂಭವಾಗಿದ್ದ ಸಮಿಧಾ ಉಚಿತ ಚಿಕಿತ್ಸಾಲಯದಲ್ಲಿ ಇಂದು ಇತರೆ ಬಡಜನರಿಗೂ ಶುಲ್ಕರಹಿತ ವೈದ್ಯಕೀಯ ಶುಶ್ರೂಷೆ ನೀಡಲಾಗುತ್ತಿದೆ. ಪಟ್ಟಣದ ದೊಡ್ಡ ದೊಡ್ಡ ವೈದ್ಯರುಗಳೂ ಇಲ್ಲಿ ಒಂದಿಷ್ಟು ಸಮಯ ಉಚಿತ ಸೇವೆ ಸಲ್ಲಿಸುತ್ತಿದ್ದಾರೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಪುರಸ್ಕಾರವೂ ಸೇರಿದಂತೆ 23 ಅನ್ಯಾನ್ಯ ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟ ದಿವ್ಯ ಪ್ರೇಮ ಸೇವಾ ಮಿಷನ್, ಮಹಿಳಾ ಕುಷ್ಠರೋಗಿಗಳೊಂದಿಗೆ ಬಡಕುಟುಂಬಗಳ ಅನ್ಯ ಸ್ತ್ರೀಯರಿಗೂ ವೃತ್ತಿಪರ ತರಬೇತಿ ನೀಡಿ ಸ್ವಾವಲಂಬನೆಯ ಹಾದಿಯಲ್ಲಿ ಮುನ್ನಡೆಸುತ್ತಿದೆ. ಸುತ್ತಮುತ್ತಲಿನ ಸ್ಥಿತಿವಂತರು ತಂತಮ್ಮ ಮಕ್ಕಳ ಜನ್ಮದಿನದ ಆಚರಣೆಯನ್ನು ವಂದೇಮಾತರಂ ಕುಂಜದಲ್ಲಿ ಏರ್ಪಡಿಸುತ್ತಿದ್ದಾರೆ. ಸೇವೆಯನ್ನು ಸೌಭಾಗ್ಯವೆಂದು ತಿಳಿದು ಬಾಳುತ್ತಿರುವ ಆಶೀಶರು – "ಕುಷ್ಠರೋಗಿಗಳ ಮಕ್ಕಳಿಗೆ ಲಭಿಸಿರುವ ಸಾಮಾಜಿಕ ಸ್ಥಾನಮಾನವೇ ನಮ್ಮ ಅತಿದೊಡ್ಡ ಹೆಗ್ಗಳಿಕೆ" ಎನ್ನುತ್ತಾರೆ.

ಸಂಪರ್ಕ ಸಂಖ್ಯೆ: ಸಂಜಯ ಚತುರ್ವೇದಿ – **9837088910**

## ಕಥನ – ಮಥನ

ಪುಸ್ತಕ ಪರಿಚಯ

**ಸಂಪಾದಕರು:** ವಿನಾಯಕ ಭಟ್ಟ ಮೂರೂರು, ರಮೇಶ ದೊಡ್ಡಪುರ
**ಪ್ರಕಾಶಕರು:** ವಿಶ್ವ ಸಂವಾದ ಕೇಂದ್ರ ಕರ್ನಾಟಕ
**ಬೆಲೆ:** 150ರೂ

ಇತ್ತೀಚಿನ ವೈಚಾರಿಕ ಚರ್ಚಾಗೋಷ್ಠಿಗಳಲ್ಲಿ ನರೇಟಿವ್ ಶಬ್ದವನ್ನು ಹೆಚ್ಚಾಗಿ ಕೇಳುತ್ತೇವೆ. ಮಾಧ್ಯಮಗಳ ಸುದ್ದಿಗಳಲ್ಲೂ, ಅಂಕಣಬರಹಗಳಲ್ಲೂ ಈ ಶಬ್ದ ಹೆಚ್ಚಾಗಿಯೇ ಸುಳಿದಾಡುತ್ತಿದೆ.




ವೈಚಾರಿಕ ವಲಯದಲ್ಲಿ ನರೇಟಿವ್ (Narrative) – ಎಂದು ಹೆಚ್ಚು ಪ್ರಚಲಿತವಾಗಿರುವ ಇಂಗ್ಲಿಷ್ ಪದದ ಕನ್ನಡ ಸಮಾನಾರ್ಥಕ ಪದವೇ 'ಕಥನ'. ಎಲ್ಲಾ ಭಾರತೀಯ ಕಥನಗಳು ಸತ್ಯದ ಆಧಾರದಲ್ಲಿ ಮೂಡಿಬಂದಿವೆ. ಕಥನ ಎಂದರೆ ಸತ್ಯವಾದ ಘಟನೆಗಳ ನಿರೂಪಣೆ ಅಥವಾ ಕಾಲ್ಪನಿಕವಾಗಿ ಕಟ್ಟಲ್ಪಟ್ಟ ಕಥಾನಕ ಎರಡೂ ಆಗಿರಬಹುದು. ಅಂದರೆ ಕಥನವು ವಾಸ್ತವದ ನೆಲೆಗಟ್ಟಿನಲ್ಲೂ ಕಟ್ಟಲ್ಪಡುತ್ತದೆ. ಕೆಲವೊಮ್ಮೆ ಅವಾಸ್ತವ ಅಥವಾ ಕಲ್ಪಿತ, ಪೂರ್ತಿ ಸತ್ಯವಲ್ಲದ ಸಂಗತಿಗಳಿಂದಲೂ ಕಥನಗಳು ಹುಟ್ಟಿಕೊಳ್ಳುತ್ತವೆ. ಕಥನ (Narrative)ಕ್ಕೆ ಪ್ರತಿಕ್ರಿಯೆಯಾಗಿ ಪ್ರತಿಕಥನ (Counter Narrative)ಗಳು ರೂಪುಗೊಳ್ಳುತ್ತವೆ. ಸುಳ್ಳು ಕಥನಗಳನ್ನು ಬಯಲು ಮಾಡಿ ಪ್ರತಿಕಥನಗಳನ್ನು ಕಟ್ಟಬೇಕು ನಿಜ. ಆದರೆ ಆ ಅವಸರದಲ್ಲಿ ಪ್ರತಿಸುಳ್ಳನ್ನು ಕಥನವಾಗಿ ಕಟ್ಟಬಾರದು ಎನ್ನುವ ಎಚ್ಚರ ನಮಗಿರಬೇಕು. ಯುಕ್ತವಾದ ಮತ್ತು ಅಗತ್ಯವಾದ ಸಂಗತಿಗಳನ್ನು ಹತ್ತು ಕಡೆ ಹೇಳಿ, ಬರೆದು ಕಥನಗಳಾಗಿ ಸ್ಥಾಪನೆಗೊಳ್ಳುವಂತೆ ಮಾಡುವುದು ಕೂಡ ಮುಖ್ಯ. ಈ ನಿಟ್ಟಿನಲ್ಲಿ ಪ್ರಕಟಗೊಂಡ ಕೃತಿ ಕಥನ–ಮಥನ: ನರೇಟಿವ್‌ಗಳ ಒಳಹೊರಗು.

ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

## ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು

'ಇಲ್ಲಿ ಉಗುಳಬಾರದು' ಎಂಬ ಸೂಚನೆಯನ್ನು ನಗರದ ಸ್ವಚ್ಛತೆಯನ್ನು ಕಾಪಾಡುವ ದೃಷ್ಟಿಯಿಂದ ಅನೇಕ ಕಡೆಗಳಲ್ಲಿ ನಾಮಫಲಕಗಳ ಮೂಲಕ ಅಳವಡಿಸಲಾಗಿದೆ. ಇಂತಹ ಸೂಚನೆಗಳು ನಿಜಕ್ಕೂ ಮಾನವ ಕುಲಕ್ಕೆ ಮಾಡುವ ಅಪಮಾನವೆಂದೇ ಭಾವಿಸಬೇಕು. ಏಕೆಂದರೆ ಎಲ್ಲಾ ಜೀವಿಗಳಿಗಿಂತ ಬುದ್ಧಿಜೀವಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಮಾನವ ಎಲ್ಲಿ ಹೇಗಿರಬೇಕು ಎನ್ನುವುದನ್ನು ಇಂತಹ ಸೂಚನೆಯ ಮೂಲಕ ತಿಳಿಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಅನೇಕರಿಗೆ ಎಲ್ಲೆಂದರಲ್ಲಿ ಉಗುಳುವ ಅಭ್ಯಾಸವಿದೆ. ಅದು ಫುಟ್‌ಪಾತ್ ನಿಂದ ಹಿಡಿದು ಐತಿಹಾಸಿಕ ಸ್ಥಳಗಳ ಆವರಣದವರೆಗೂ ಅವರ ಉಗುಳುವ ಸ್ವಭಾವವನ್ನು ಅವರು ಬಿಡರು. ಅದರಲ್ಲೂ ತಂಬಾಕು ಸೇವನೆ ಮಾಡುವ ಅನೇಕರು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುವುದರ ಜೊತೆಗೆ ಎಲ್ಲೆಂದರಲ್ಲಿ ಉಗುಳುವ ಮೂಲಕ ಸುತ್ತಮುತ್ತಲಿನ ಪ್ರದೇಶವನ್ನೂ ಹಾಳುಗೆಡವುತ್ತಾರೆ. ಈ ಸ್ವಭಾವವನ್ನು ಬಿಡಬೇಕು. ಎಲ್ಲೆಂದರಲ್ಲಿ ಉಗುಳದೇ ನಮ್ಮ ಸುತ್ತಮುತ್ತಲಿನ ಪ್ರದೇಶವನ್ನು ನಾವು ಸ್ವಚ್ಛವಾಗಿಟ್ಟುಕೊಳ್ಳಬೇಕು. ಇಡೀ ದೇಶ ನಮ್ಮ ಮನೆ. ನಮ್ಮ ಮನೆಯನ್ನು ನಾವು ಸ್ವಚ್ಛವಾಗಿಟ್ಟುಕೊಳ್ಳುವ ಹಾಗೆಯೇ ನಮ್ಮ ಸುತ್ತಮುತ್ತಲಿನ ಸಾರ್ವಜನಿಕ ಸ್ಥಳಗಳನ್ನು ಸುಂದರವಾಗಿರಿಸಿಕೊಳ್ಳಬೇಕು. ಇದರಿಂದ ನಮ್ಮ ಊರಿಗೆ ಭೇಟಿ ನೀಡುವ ಪರವೂರಿನವರಿಗೂ ನಮ್ಮ ಬಗ್ಗೆ ಗೌರವ ಮೂಡುತ್ತದೆ. ಸಮಾಜವೂ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುತ್ತದೆ.

ನಾಗರಿಕ ಶಿಷ್ಟಾಚಾರ




**ಸಂಪಾದಕೀಯ ಸಹಕಾರ:** ರಾಧಾಕೃಷ್ಣ ಹೊಳ್ಳ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ ಉದ್ಯಾವರ, ಪಂಚಮಿ ಬಾಕಿಲಪದವು

# ಸಾಲುದ್ದದ ಸುದ್ದಿಗಳು

## ಕರ್ನಾಟಕದ 'ನಂದಿನಿ' ಹಾಲು ದೆಹಲಿಯಲ್ಲಿ ಮಾರಾಟ ಆರಂಭ

ಇದೇ ಮೊದಲ ಬಾರಿಗೆ ರಾಷ್ಟ್ರ ರಾಜಧಾನಿ ದೆಹಲಿ ಮಾರುಕಟ್ಟೆಗೆ ನಂದಿನಿ ಹಾಲು ಲಗ್ಗೆ ಇಟ್ಟಿದೆ. ದೆಹಲಿ ಮಾರುಕಟ್ಟೆಯಲ್ಲಿ ಅಮುಲ್ ಹಾಗೂ ಮದರ್ ಡೈರಿ ಶೇಕಡಾ 70ರಷ್ಟು ಪಾಲು ಹೊಂದಿದೆ. ಸದ್ಯ ದೆಹಲಿಯಲ್ಲಿ ದಿನಕ್ಕೆ ಒಂದು ಲಕ್ಷ ಲೀಟರ್ ಹಾಲು ಮಾರಾಟದೊಂದಿಗೆ ಪ್ರಾರಂಭವಾಗಿದ್ದು, ಇದನ್ನು ಕ್ರಮೇಣ 10 ಲಕ್ಷ ಲೀಟರ್‌ಗೆ ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ. ದೆಹಲಿ ಮಾತ್ರವಲ್ಲದೆ ಮಧ್ಯಪ್ರದೇಶ, ಪಶ್ಚಿಮ ಉತ್ತರ ಪ್ರದೇಶ, ರಾಜಸ್ಥಾನ ಸೇರಿದಂತೆ ಈಶಾನ್ಯ ರಾಜ್ಯಗಳ ಮಾರುಕಟ್ಟೆ ಪ್ರವೇಶಿಸಲು ಸಿದ್ಧತೆ ನಡೆಸಿದೆ. ದೆಹಲಿಗೆ ಹಾಲನ್ನು ಮಂಡ್ಯ ಹಾಲು ಒಕ್ಕೂಟದಿಂದ ಪೂರೈಕೆ ಮಾಡುತ್ತಿದ್ದು, ಸುಮಾರು 2500 ಕಿಮೀ ದೂರಕ್ಕೆ ಕಳುಹಿಸುತ್ತಿದೆ. ಇದಕ್ಕೆ 33 ಸಾವಿರ ಕಿಲೋಲೀಟರ್ ಸಾಮರ್ಥ್ಯದ ಐದು ಟ್ಯಾಂಕರ್‌ಗಳ ಅಗತ್ಯವಿದೆ. ಪ್ರತಿವಾರ ಹಾಲು ಪೂರೈಕೆ ಮಾಡಲು 25 ಟ್ಯಾಂಕರ್‌ಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದ್ದು, ರಾಜಸ್ಥಾನದಲ್ಲಿ ಹಾಲನ್ನು ಪ್ರೋಸೆಸ್ ಮಾಡಿ ದೆಹಲಿಗೆ ಪ್ಯಾಕೆಟ್ ಮೂಲಕ ಮಾಡಲಾಗುತ್ತಿದೆ.

## 2 ಮಿಲಿಯನ್ ಡಾಲರ್ ಮೌಲ್ಯದ ಸೌರ ಯೋಜನೆ ಒಪ್ಪಂದಕ್ಕೆ ಭಾರತ ಸಹಿ



ಫಿಜಿ, ಕಾಮೊರೊಸ್, ಮಡಗಾಸ್ಕರ್ ಮತ್ತು ಸೀಶೆಲ್ಸ್‌ನಲ್ಲಿ ಯುಎಸ್‌ಡಿ 2 ಮಿಲಿಯನ್ ಮೌಲ್ಯದ ಸೌರ ಯೋಜನೆಯನ್ನು ಕಾರ್ಯಗತಗೊಳಿಸಲು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಅಂತಾರಾಷ್ಟ್ರೀಯ ಸೌರ ಒಕ್ಕೂಟದೊಂದಿಗೆ ಪ್ರಾಜೆಕ್ಟ್ ಅನುಷ್ಠಾನ ಒಪ್ಪಂದಕ್ಕೆ ಮಂಗಳವಾರ ಸಹಿ ಹಾಕಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಕ್ವಾಡ್ ಕ್ಲೈಮೇಟ್ ವರ್ಕಿಂಗ್ ಗ್ರೂಪ್ ಉಪಕ್ರಮದ ಅಡಿಯಲ್ಲಿ ಈ ಇಂಡೋ-ಪೆಸಿಫಿಕ್ ದೇಶಗಳಲ್ಲಿ ಹೊಸ ಸೌರ ಯೋಜನೆಗಳಲ್ಲಿ ಯುಎಸ್‌ಡಿ 2 ಮಿಲಿಯನ್ ಹೂಡಿಕೆ ಮಾಡಲು ಭಾರತ ಬದ್ಧತೆ ತೋರಿಸಿದೆ.

## AI ಅಭಿವೃದ್ಧಿಯಲ್ಲಿ 4ನೇ ಸ್ಥಾನ ಪಡೆದ ಭಾರತ: ವರದಿ

ಸ್ಟಾನ್‌ಫೋರ್ಡ್ HAI ಸಂಸ್ಥೆಯು ಜಾಗತಿಕ ಮಟ್ಟದಲ್ಲಿ AI ನೇತೃತ್ವದ ತಂತ್ರಜ್ಞಾನ ಪರಿಸರ ವ್ಯವಸ್ಥೆಯ ಕುರಿತು ತನ್ನ ಸಂಶೋಧನೆ ಗ್ಲೋಬಲ್ ವೈಬ್ರೆನ್ಸಿ ಟೂಲ್ 2024 ಅನ್ನು ಬಿಡುಗಡೆ ಮಾಡಿದೆ. ವರದಿಯ ಪ್ರಕಾರ AI ಅಭಿವೃದ್ಧಿಯಲ್ಲಿ ಭಾರತವು ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ. ಸಂಶೋಧನಾ ಪ್ರಬಂಧಗಳು, ಖಾಸಗಿ ಹೂಡಿಕೆ, ಪೇಟೆಂಟ್‌ಗಳನ್ನು ಒಳಗೊಂಡಂತೆ ಪ್ರಮುಖ ಸೂಚಕಗಳ ಮೇಲೆ ದೇಶಗಳ AI ಪರಿಸರ ವ್ಯವಸ್ಥೆಯನ್ನು ಅಳೆಯುವ ಟ್ರ್ಯಾಕಿಂಗ್ ಉಪಕರಣವನ್ನು ಬಳಸಿಕೊಂಡು 36 ದೇಶಗಳ ಡೇಟಾವನ್ನು ವಿಶ್ಲೇಷಿಸಿದೆ.

## ಕೇಂದ್ರ ಸರ್ಕಾರದಿಂದ ಟೀಚರ್ಸ್ ಆ್ಯಪ್ ಅನಾವರಣ




21ನೇ ಶತಮಾನದ ತರಗತಿ ಕೊಠಡಿಗಳ ಬೇಡಿಕೆಗಳನ್ನು ಪೂರೈಸಲು ಭವಿಷ್ಯ-ಸಿದ್ಧ ಕೌಶಲ್ಯಗಳೊಂದಿಗೆ ಶಿಕ್ಷಕರನ್ನು ಸಜ್ಜುಗೊಳಿಸುವ ಮೂಲಕ ಭಾರತದಲ್ಲಿ ಶಿಕ್ಷಣವನ್ನು ಕ್ರಾಂತಿಗೊಳಿಸುವ ಮಹತ್ತರದ ಉದ್ದೇಶದಿಂದ ಟೀಚರ್ ಆ್ಯಪ್ ಅನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನವದೆಹಲಿಯಲ್ಲಿ ಅನಾವರಣಗೊಳಿಸಿದ್ದಾರೆ. ಈ ಅಪ್ಲಿಕೇಶನ್ ನಿರಂತರ ಸಾಮರ್ಥ್ಯ ವರ್ಧನೆ, ನವೀನ ಕೋರ್ಸ್ ವಿಷಯ, ತಂತ್ರಜ್ಞಾನ ಮತ್ತು ಸಮುದಾಯ-ನಿರ್ಮಾಣ ವೈಶಿಷ್ಟ್ಯಗಳ ಮೂಲಕ ಶಿಕ್ಷಕರನ್ನು ಸಬಲಗೊಳಿಸುತ್ತದೆ

## ಒಂದೇ ತಿಂಗಳಲ್ಲಿ 18 ಲಕ್ಷ 81 ಸಾವಿರ ಸದಸ್ಯರನ್ನು ನೋಂದಾಯಿಸಿದ ಇಪಿಎಫ್‌ಒ

ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (EPFO) ಈ ವರ್ಷದ ಸೆಪ್ಟೆಂಬರ್‌ನಲ್ಲಿ 18 ಲಕ್ಷ 81 ಸಾವಿರ ಸದಸ್ಯರ ನಿವ್ವಳ ಸೇರ್ಪಡೆಯನ್ನು ನೋಂದಾಯಿಸಿದೆ. ಹೆಚ್ಚುತ್ತಿರುವ ಉದ್ಯೋಗಾವಕಾಶಗಳು, ಉದ್ಯೋಗಿಗಳ ಪ್ರಯೋಜನಗಳ ಬಗ್ಗೆ ಹೆಚ್ಚಿದ ಅರಿವು ಮತ್ತು ಇಪಿಎಫ್‌ಒದ ಪರಿಣಾಮಕಾರಿ ಔಟ್ರೀಚ್ ಉಪಕ್ರಮಗಳು ಸದಸ್ಯರ ಹೆಚ್ಚಳಕ್ಕೆ ಕಾರಣವೆಂದು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಹೇಳಿದೆ. ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್‌ನಲ್ಲಿ ಇಪಿಎಫ್‌ಒ 9 ಲಕ್ಷ 47 ಸಾವಿರ ಹೊಸ ಸದಸ್ಯರನ್ನು ನೋಂದಾಯಿಸಿಕೊಂಡಿದೆ ಎಂದು ತಾತ್ಕಾಲಿಕ ವೇತನದಾರರ ಡೇಟಾ ತೋರಿಸಿದೆ. ವೇತನದಾರರ ದತ್ತಾಂಶದ ಲಿಂಗವಾರು ವಿಶ್ಲೇಷಣೆಯು ತಿಂಗಳ ಅವಧಿಯಲ್ಲಿ ಸುಮಾರು 2,47,000 ಮಹಿಳೆಯರನ್ನು ಹೊಸ ಸದಸ್ಯರನ್ನಾಗಿ ಸೇರಿಸಿದೆ.

# ಸಾಮಾಜಿಕ ಕಾರ್ಯಕ್ಕೆ ಅರ್ಪಿಸಿಕೊಂಡು 100 ಮಂದಿಯ ಜೀವನಕ್ಕೆ ಆಧಾರವಾದ 'ಅಪರ್ಣಾ'

ಪ್ರೇರಣಾ

ತಮ್ಮ ಏಕಾಂಗಿತನವನ್ನು ಹೊಗಲಾಡಿಸಿಕೊಳ್ಳಲು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ 60 ವರ್ಷ ವಯಸ್ಸಿನ ಅಪರ್ಣಾ ದಾಸ್ ಅವರು ಇಂದು ಎಳೆಯ ಮಕ್ಕಳಿಂದ ವೃದ್ಧರವರೆಗೆ ಸುಮಾರು 100 ಜನರ ಜೀವನವನ್ನು ಬದಲಾಯಿಸಲು ಸಹಾಯ ಮಾಡಿದ್ದಾರೆ. ಅವರು ತನ್ನ ಸಮಯ ಮತ್ತು ಶಕ್ತಿಯನ್ನು ಇತರರಿಗೆ ಸಹಾಯ ಮಾಡಲು ನಿರಂತರವಾಗಿ ವಿನಿಯೋಗಿಸುತ್ತಿದ್ದಾರೆ. ಆದಾಗ್ಯೂ, ದಶಕಗಳ ಹಿಂದೆ, ಬಿಡುವಿಲ್ಲದ ಅವಿಭಕ್ತ ಕುಟುಂಬದ ಬೇಡಿಕೆಗಳನ್ನು ಪೂರೈಸುವತ್ತ ಗಮನಹರಿಸುತ್ತಿರುವಾಗ, ಅಪರ್ಣಾ ಅವರು ಒಂದು ದಿನ ಅನೇಕರ ಭವಿಷ್ಯವನ್ನು ರೂಪಿಸುತ್ತಾರೆ ಎಂದು ಊಹಿಸಿರಲಿಲ್ಲ.

1994ರಲ್ಲಿ ತಾಯಿಯಾದ ನಂತರ, ಅಪರ್ಣಾ ತನ್ನ ಮಗಳನ್ನು ಬೆಳೆಸುವಲ್ಲಿ ಹೊಸ ಜೀವನವನ್ನು ಕಂಡುಕೊಂಡರು. ತನ್ನ ಮಗುವಿನ ಭವಿಷ್ಯವು ಉಜ್ವಲಗೊಳಿಸಲು ಅವರು ತನ್ನನ್ನು ತಾನು ತೊಡಗಿಸಿಕೊಂಡರು, ಅವಳನ್ನು ಪೋಷಿಸಲು ಮತ್ತು ಬೆಂಬಲಿಸಲು ತನ್ನೆಲ್ಲ ಶಕ್ತಿಯನ್ನು ಧಾರೆ ಎರೆದರು. ಆದರೆ ಮಗಳು ತನ್ನ ಸ್ವಂತ ಕನಸುಗಳನ್ನು ಬೆನ್ನಟ್ಟಲು ಕೋಲ್ಕತ್ತಾಗೆ ಹೋದಾಗ, ಅಪರ್ಣಾ ತನ್ನ ಜೀವನದಲ್ಲಿ ಒಂದು ಶೂನ್ಯತ್ವವನ್ನು ಅನುಭವಿಸಿದರು.

2015ರ ಸುಮಾರಿಗೆ, ಅಪರ್ಣಾ ಅವರು ಬರಾಸತ್‌ನಲ್ಲಿರುವ ಕಿಶಾಲಯ ಮಕ್ಕಳ ಮನೆಯಲ್ಲಿ ಸ್ವಯಂಸೇವಕರಾಗಿ ಸಾಮಾಜಿಕ ಕಾರ್ಯದಲ್ಲಿ ತಮ್ಮ ಪ್ರಯಾಣವನ್ನು ಪ್ರಾರಂಭಿಸಿದರು. ತನ್ನ ಸಮಯವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವ ಮಾರ್ಗವಾಗಿ ಪ್ರಾರಂಭವಾದದ್ದು ಶೀಘ್ರದಲ್ಲೇ ಆಜೀವ ಧ್ಯೇಯವಾಗಿ ಬೆಳೆಯಿತು. ಅನಾಥ ಮಕ್ಕಳನ್ನು ನೋಡಿಕೊಳ್ಳಲು, ಅವರಿಗೆ ಅಗತ್ಯವಾದ ಜೀವನ ಕೌಶಲ್ಯಗಳನ್ನು ಕಲಿಸಲು ಮತ್ತು ಅಚಲವಾದ ಪ್ರೀತಿ, ಬೆಂಬಲವನ್ನು ನೀಡಲು ಶುರುಮಾಡಿದರು.

ಅಪರ್ಣಾಗೆ ಇತರರಿಗೆ ಸೇವೆ ಸಲ್ಲಿಸುವುದು ಮಾತ್ರವಲ್ಲದೆ ತನ್ನ ಸ್ವಂತ ಕಾಲಿನ ಮೇಲೆ ನಿಲ್ಲುವುದು ಅವರ ಬದುಕಿನ ತತ್ತ್ವವಾಗಿದೆ. "ನಾನು ನನ್ನ ಕೆಲಸಕ್ಕೆ ಒಂದು ಪೈಸೆಯನ್ನೂ ತೆಗೆದುಕೊಳ್ಳುವುದಿಲ್ಲ, ನನ್ನ ಗಳಿಕೆ ನನ್ನದೇ" ಎಂದು ಅವರು ಹೇಳುತ್ತಾರೆ. ಸ್ವಾವಲಂಬಿತನಕ್ಕಾಗಿ ಕಾಲಾನಂತರದಲ್ಲಿ, ಅವರು ಅಣಬೆ ಕೃಷಿ ಸೇರಿದಂತೆ ತನ್ನದೇ ಆದ ಆದಾಯದ ಮೂಲವನ್ನು ರೂಪಿಸಿಕೊಂಡರು.



"ನಾವು ಹಣದಿಂದ ಸಾಮಾಜಿಕ ಕಾರ್ಯವನ್ನು ಮಾಡಬಹುದು ಎಂದು ನಾನು ನಂಬುವುದಿಲ್ಲ. ನಿಜವಾದ ಸೇವೆಯು ಒಬ್ಬರ ಹೃದಯದ ಆಳದಿಂದ ಹುಟ್ಟುತ್ತದೆ. ಇತರರಿಗೆ ಪೂರ್ಣ ಹೃದಯದಿಂದ ಸಹಾಯ ಮಾಡಿ ಮತ್ತು ಎಲ್ಲವೂ ಕಾರ್ಯರೂಪಕ್ಕೆ ಬರುತ್ತವೆ." – **ಅಪರ್ಣಾ ದಾಸ್**

ಚಳಿಗಾಲದಲ್ಲಿ, ಅಪರ್ಣಾ ಅವರು ತಮ್ಮ ಸಮುದಾಯದಲ್ಲಿ ಮಾರಾಟ ಮಾಡುವ ಬಂಗಾಳಿಯಲ್ಲಿ ಬೋರಿ ಎಂದು ಕರೆಯಲ್ಪಡುವ ಒಣಗಿದ ಲೆಂಟಿಲ್ ಡಂಪ್ಲಿಂಗ್‌ಗಳನ್ನು ತಯಾರಿಸಲು ಸಮಯವನ್ನು ನೀಡುತ್ತಾರೆ. "ನಾನು ಯಾರಿಂದಲೂ ಹಣ ತೆಗೆದುಕೊಳ್ಳುವ ಅಗತ್ಯವಿಲ್ಲ. ನಾನು ನನ್ನದೇ ಆದ ಸಂಪಾದನೆಯ ಮೇಲೆ ನಿಲ್ಲುತ್ತೇನೆ, ನನ್ನ ಮತ್ತು ಇತರರಿಗೆ ನನ್ನ ಸ್ವಂತ ಕೈಗಳಿಂದ ಸಹಾಯವನ್ನು ಒದಗಿಸುತ್ತೇನೆ," ಎಂದು ಅವರು ಹೇಳುತ್ತಾರೆ. ಈ ಕೆಲಸವು ಅವರಿಗೆ ಖುಷಿಯಾಗಿರಲು ಸಹಾಯ ಮಾಡುತ್ತದೆ.

2020 ರಲ್ಲಿ ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ಅವರು ಸ್ಮರಣೀಯ ಕ್ಷಣವೊಂದನ್ನು ಸಾಕ್ಷೀಕರಿಸಿದರು. ಆರಾಧನಾ ಸಾಮಾಜಿಕ ಮತ್ತು ಅಭಿವೃದ್ಧಿ ಸಂಸ್ಥೆಯ ಮಕ್ಕಳು ವೈರಸ್‌ನಿಂದ ಬಳಲಿದಾಗ ಹಣಕಾಸಿನ ನೆರವು ನೀಡಲು ಸಾಧ್ಯವಾಗದೆ ಅಪರ್ಣಾ ಹೇಗೆ ಸಹಾಯ ಮಾಡಬೇಕೆಂದು ಗೊಂದಲಕ್ಕೊಳಗಾಗಿದ್ದರು. ಆ ಸಂದರ್ಭದಲ್ಲಿ ಅವರ ಸ್ನೇಹಿತರೊಬ್ಬರು ತನ್ನ ಮೊಮ್ಮಗಳ ಹುಟ್ಟುಹಬ್ಬದ ಆಚರಣೆಯ ಪ್ರಯುಕ್ತ ಆಹಾರವನ್ನು ನೀಡಲು ಮುಂದಾದರು. ಅಪರ್ಣಾ ಅವರು ದೈಹಿಕವಾಗಿ ಅಲ್ಲಿರಲು ಸಾಧ್ಯವಾಗದಿದ್ದರೂ ಸಹ, ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡಲು ಇದು ಸಹಕಾರಿಯಾಯಿತು.

ಅಪರ್ಣಾ ಅವರು ಇತರರಿಗಿಂತ ಭಿನ್ನವಾಗಿರಿಸುವುದು ವೈಯಕ್ತಿಕ ಜವಾಬ್ದಾರಿಯ ಶಕ್ತಿಯಲ್ಲಿ ಅವರಿಗಿರುವ ನಂಬಿಕೆಯಿಂದ. ತಮ್ಮ ಧನಾತ್ಮಕ ಮಾತುಗಳಿಂದ ವ್ಯಕ್ತಿಗಳನ್ನು ಸ್ವಯಂಪೂರ್ಣತೆಯ ಕಡೆಗೆ ಕೊಂಡೊಯ್ಯಲು ಮಾರ್ಗದರ್ಶನ ಮಾಡುತ್ತಿದ್ದಾರೆ. "ನಿಮ್ಮಲ್ಲಿ ಕೌಶಲ್ಯವಿದ್ದರೆ, ನಿಮ್ಮ ಭವಿಷ್ಯವನ್ನು ನಿರ್ಮಿಸಲು ಅದನ್ನು ಬಳಸಿ" ಎಂದು ಅಪರ್ಣಾ ಸಲಹೆ ನೀಡುತ್ತಾರೆ. ಇದು ಮಕ್ಕಳಿಗೆ ಜೀವನ ಕೌಶಲ್ಯಗಳನ್ನು ಕಲಿಸುವಲ್ಲಿ, ವಯಸ್ಕರಿಗೆ ಪ್ರತಿಭೆಯ ಆಧಾರದ ಮೇಲೆ ಸಣ್ಣ ಉದ್ಯಮಗಳನ್ನು ಪ್ರಾರಂಭಿಸುವಲ್ಲಿ ಸಹಾಯ ಮಾಡುತ್ತಿದೆ.

ಅಪರ್ಣಾರೊಂದಿಗೆ ಸಹಸ್ರ ಸವಾಲುಗಳು ಬರುತ್ತಿದ್ದರೂ, ಅವರು ಎದೆಗುಂದದೆ ಮುಂದುವರಿಯುತ್ತಾರೆ. ಅಗತ್ಯವಿರುವ ಸಂಸ್ಥೆಗಳೊಂದಿಗೆ ದೇಣಿಗೆ ನೀಡಲು ಬಯಸುವವರನ್ನು ಸಂಪರ್ಕಿಸುವ ಮೂಲಕ ತನ್ನ ಸಮುದಾಯಕ್ಕೆ ಸೇವೆ ಸಲ್ಲಿಸಲು ಅವರು ಸಮರ್ಪಿತಳಾಗಿದ್ದಾರೆ. ತನ್ನ ವಿಸ್ತೃತ ಜಾಲದ ಮೂಲಕ ಆಹಾರ, ಬಟ್ಟೆ ಮತ್ತು ವೈದ್ಯಕೀಯ ನೆರವು ನೀಡಿ ಸಂತೃಪ್ತಿಯ ಬದುಕನ್ನು ನಡೆಸುತ್ತಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th DECEMBER 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-12-2024



## ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಕೂಡಲೇ ನಿಲ್ಲಬೇಕು: ದತ್ತಾತ್ರೇಯ ಹೊಸಬಾಳೆ

ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಇತರೆ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಆಗುತ್ತಿರುವ ದೌರ್ಜನ್ಯ ಹಾಗೂ ಅನ್ಯಾಯವನ್ನು ವಿರೋಧಿಸಿ ಶಾಂತಿಯುತ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಇಸ್ಕಾನ್ ಸನ್ಯಾಸಿ ಚಿನ್ಮಯಿಕೃಷ್ಣ ದಾಸ್ ಅವರ ಬಂಧನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಖಂಡಿಸಿದೆ. ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆಯವರು ಪ್ರಕಟಣೆಯ ಮೂಲಕ ಬಾಂಗ್ಲಾದಲ್ಲಾಗುತ್ತಿರುವ ಘಟನೆಯನ್ನು ಖಂಡಿಸಿ ಹೇಳಿಕೆಯನ್ನು ನೀಡಿದ್ದಾರೆ.

**ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆ:** ಬಾಂಗ್ಲಾದೇಶದಲ್ಲಿ ಇಸ್ಲಾಮಿಕ್ ಮೂಲಭೂತವಾದಿಗಳು ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ಮೇಲೆ ದಾಳಿ, ಹತ್ಯೆ, ಲೂಟಿ, ಬೆಂಕಿಯ ದಾಳಿ



ಹಾಗೂ ಮಹಿಳೆಯರ ಮೇಲಿನ ಅಮಾನವೀಯ ದೌರ್ಜನ್ಯಗಳನ್ನು ನಡೆಸುತ್ತಿರುವುದು ಅತ್ಯಂತ ಚಿಂತಾಜನಕ ಸಂಗತಿ. ಇಂತಹ ಹೇಯಕೃತ್ಯವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘವು ಸಂಪೂರ್ಣವಾಗಿ ಖಂಡಿಸುತ್ತದೆ. ವರ್ತಮಾನದ ಬಾಂಗ್ಲಾದೇಶದ ಸರ್ಕಾರ ಮತ್ತು ಅನ್ಯ ಏಜೆಂಸಿಗಳು ಇದನ್ನು ನಿಲ್ಲಿಸುವ ಬದಲು ಕೇವಲ ಮೂಕದರ್ಶಕರಾಗಿದ್ದಾರೆ. ಬಾಂಗ್ಲಾದೇಶದ ಹಿಂದೂಗಳ ವಿರುದ್ಧ ಬಲವಂತವಾಗಿ ಹಾಗೂ ತಮ್ಮ ಸ್ವರಕ್ಷಣೆಗಾಗಿ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಎದ್ದ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನಗಳಾಗುತ್ತಿವೆ. ಅವರ ಮೇಲೆ ಅನ್ಯಾಯ ಹಾಗೂ ಅತ್ಯಾಚಾರದಂತಹ ದುಷ್ಕೃತ್ಯಗಳ ಹೊಸ ಯುಗವು ಹೊರಹೊಮ್ಮುತ್ತಿರುವಂತೆ ತೋರುತ್ತಿದೆ.

ಹಾಗೆಯೇ ಇಂತಹ ಘಟನೆಗಳ ವಿರುದ್ಧ ಹಿಂದೂಗಳ ಪರ ಶಾಂತಿಯುತ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಇಸ್ಕಾನ್ ನ ಸನ್ಯಾಸಿ ಚಿನ್ಮಯ್ ಕೃಷ್ಣದಾಸರನ್ನು ಬಾಂಗ್ಲಾದೇಶದ ಸರಕಾರದ ಮೂಲಕ ಸೆರೆಮನೆಗೆ ಕಳುಹಿಸಿರುವುದು ಅನ್ಯಾಯಪೂರ್ಣವಾದದ್ದು.

ರಾಷ್ಟ್ರೀಯ ಸ್ವಯಂಸೇವಕ ಸಂಘವು ಬಾಂಗ್ಲಾದೇಶ ಸರ್ಕಾರದೊಂದಿಗೆ ಮನವಿ ಮಾಡುವುದೇನೆಂದರೆ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯಗಳು ತಕ್ಷಣವೇ ನಿಲ್ಲುವುದನ್ನು ಅವರು ಖಚಿತಪಡಿಸಿಕೊಳ್ಳಬೇಕು ಹಾಗೂ ಇಸ್ಕಾನ್‌ನ ಚಿನ್ಮಯ್ ಕೃಷ್ಣದಾಸ್ ಅವರನ್ನು ಸೆರೆವಾಸದಿಂದ ಮುಕ್ತಗೊಳಿಸಬೇಕು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಭಾರತ ಸರ್ಕಾರದೊಂದಿಗೂ ಮನವಿ ಮಾಡುವುದೇನೆಂದರೆ ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಇತರೆ ಎಲ್ಲಾ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನು ತಡೆಯುವ ತನ್ನ ಪ್ರಯತ್ನವನ್ನು ಸರ್ಕಾರ ಸಾಧ್ಯವಾದಷ್ಟು ಮುಂದುವರಿಸಬೇಕು. ಹಾಗೂ ಅದಕ್ಕೆ ಪೂರಕವಾಗಿ ವೈಶ್ವಿಕ ಅಭಿಮತವನ್ನು ರಚಿಸುವ ಮತ್ತು ಅತಿಶೀಘ್ರದಲ್ಲಿ ಆವಶ್ಯಕ ಹೆಜ್ಜೆಯನ್ನು ಇಡಬೇಕು.

ಈ ಮಹತ್ವಪೂರ್ಣ ಸಮಯದಲ್ಲಿ ಭಾರತ ಮತ್ತು ವೈಶ್ವಿಕ ಸಮುದಾಯ ಹಾಗೂ ಸಂಸ್ಥೆಗಳು ಬಾಂಗ್ಲಾದೇಶದಲ್ಲಿ ದೌರ್ಜನ್ಯಕ್ಕೆ ಒಳಗಾದವರ ಜೊತೆ ನಿಂತು ಅವರಿಗೆ ನಾವು ನಮ್ಮ ಬೆಂಬಲವನ್ನು ವ್ಯಕ್ತಪಡಿಸಬೇಕು ಮತ್ತು ಇದಕ್ಕಾಗಿ ನಮ್ಮ ನಮ್ಮ ಸರ್ಕಾರಗಳಿಂದ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಒತ್ತಾಯಿಸಬೇಕು, ಇದು ವಿಶ್ವ ಶಾಂತಿ ಮತ್ತು ಸಹೋದರತ್ವಕ್ಕೆ ಅವಶ್ಯಕವಾಗಿದೆ.

## ತಿರುಮಲದಲ್ಲಿ ದ್ವೇಷ ಭಾಷಣ ನಿಷೇಧ: ಟಿಟಿಡಿ ನಿರ್ಧಾರ

ಕೋಟ್ಯಾಂತರ ಹಿಂದುಗಳ ಶ್ರದ್ಧಾಕೇಂದ್ರ ತಿರುಮಲದಲ್ಲಿ ರಾಜಕೀಯ, ದ್ವೇಷ ಭಾಷಣಗಳಿಗೆ ನಿಷೇಧ ಹೇರಿ ತಿರುಮಲ ತಿರುಪತಿ ದೇವಸ್ಥಾನಂ(ಟಿಟಿಡಿ) ಮಹತ್ವದ ಆದೇಶವನ್ನು ಹೊರಡಿಸಿದೆ. ತಿರುಮಲದ ಪಾವಿತ್ರತೆ ಮತ್ತು ಆಧ್ಯಾತ್ಮಿಕ ಶಾಂತಿ ಕಾಪಾಡುವ ಉದ್ದೇಶದಿಂದ ರಾಜಕೀಯ ಹಾಗೂ ದ್ವೇಷದ ಭಾಷಣಗಳನ್ನು ನಿಷೇಧಿಸಿ ತೀರ್ಮಾನ ಕೈಗೊಳ್ಳಲಾಗಿದೆ. ಹಾಗೆಯೇ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿಯೂ ಟಿಟಿಡಿ ಎಚ್ಚರಿಕೆ ನೀಡಿದೆ. ಕೆಲವು ರಾಜಕಾರಣಿಗಳು ತಿರುಮಲ ಆವರಣದಲ್ಲಿ ಪ್ರಾರ್ಥನೆ ಮತ್ತು ದರ್ಶನ ಪಡೆಯುವ ದೃಶ್ಯಗಳನ್ನು ಪೋಸ್ಟ್ ಮಾಡಿದ ನಂತರ ಟಿಟಿಡಿ ಈ ನಿರ್ಧಾರಕ್ಕೆ ಬಂದಿದೆ. ಸದಾ ಗೋವಿಂದ ನಾಮಸ್ಮರಣೆ ಮೊಳಗುವ ಪವಿತ್ರ ತಿರುಮಲಾ ದೇವಸ್ಥಾನದಲ್ಲಿ ಇತ್ತೀಚಿನ ದಿನಗಳಲ್ಲಿ ರಾಜಕೀಯ ನಾಯಕರು ಸೇರಿ ಕೆಲವರು ದೇವರ ದರ್ಶನ ಪಡೆದ ನಂತರ ದೇವಸ್ಥಾನದ ಎದುರು ಮಾಧ್ಯಮಗಳ ಮುಂದೆ ರಾಜಕೀಯ ದ್ವೇಷದ ಹೇಳಿಕೆಗಳನ್ನು ನೀಡುವ ಮೂಲಕ ಆಧ್ಯಾತ್ಮಿಕತೆಗೆ ಧಕ್ಕೆ ಉಂಟು ಮಾಡುತ್ತಿರುವುದು ಟಿಟಿಡಿ ಗಮನಕ್ಕೆ ಬಂದಿದೆ. ಹೀಗಾಗಿ ಇಂತಹ ನಿರ್ಧಾರಕ್ಕೆ ಬರಲಾಗಿದೆ ಹಾಗೂ ಈ ನಿರ್ಧಾರಕ್ಕೆ ಎಲ್ಲರೂ ಸಹಕರಿಸುವಂತೆ ಟಿಟಿಡಿ ಅಧಿಕಾರಿ ಮನವಿ ಮಾಡಿದ್ದಾರೆ. ತಿರುಮಲದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಹಿಂದುಗಳೇ ಆಗಿರಬೇಕೆಂದು ಪ್ರತಿಪಾದಿಸಿರುವ ಟಿಟಿಡಿ ನೂತನ ಅಧ್ಯಕ್ಷ ಬಿ. ಆರ್. ನಾಯ್ಡು, ಈ ಕುರಿತಂತೆ ಇತರೆ ಧರ್ಮಕ್ಕೆ ಸೇರಿದ ಸಿಬ್ಬಂದಿ ಬಗ್ಗೆ ಆಂಧ್ರಪ್ರದೇಶ ಸರ್ಕಾರದ ಜತೆ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ.

## ಮೀಸಲು ಲಾಭಕ್ಕಾಗಿ ಮತಾಂತರ ಅಕ್ಷಮ್ಯ: ಸರ್ವೋಚ್ಚ ನ್ಯಾಯಾಲಯ

ಅನ್ಯ ಧರ್ಮ, ಮತ, ರಿಲಿಜನ್‌ಗಳ ಮೇಲೆ ನೈಜವಾಗಿ ನಂಬಿಕೆ ಇಲ್ಲದಿದ್ದರೂ, ಕೇವಲ ಮೀಸಲಾತಿ ಪ್ರಯೋಜನ ಪಡೆಯುವ ಸಲುವಾಗಿ ಧಾರ್ಮಿಕ ಮತಾಂತರಕ್ಕೆ ಒಳಗಾಗುವುದು ಮೀಸಲಾತಿ ನೀತಿಯ ಸಾಮಾಜಿಕ ಉದ್ದೇಶವನ್ನು ವಿಫಲ ಗೊಳಿಸುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಕ್ರೈಸ್ತ ರಿಲಿಜನ್‌ನಲ್ಲಿ ಜನಿಸಿದ ಸೆಲ್ವರಾಣಿ ಎಂಬ ಮಹಿಳೆ ಪುದುಚೇರಿಯಲ್ಲಿ ಅಪ್ಪರ್ ಡಿವಿಷನ್ ಕ್ಲರ್ಕ್ ಹುದ್ದೆಗಾಗಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆಯುವುದಕ್ಕಾಗಿ ತನ್ನನ್ನು ಹಿಂದು ಎಂದು ಹೇಳಿಕೊಂಡಿದ್ದರು. ಆದರೆ, ಆಕೆಗೆ ಎಸ್‌ಸಿ ಪ್ರಮಾಣಪತ್ರ ನೀಡಲು ಸಾಧ್ಯವಿಲ್ಲ ಎಂಬ ಮದ್ರಾಸ್ ಹೈಕೋರ್ಟ್ ತೀರ್ಪನ್ನು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಸೆಲ್ವರಾಣಿ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದರು. ಈಗ ಸರ್ವೋಚ್ಚ ನ್ಯಾಯಾಲಯವೂ ಮದ್ರಾಸ್ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿದ್ದು ಇಲ್ಲಿ ಅರ್ಜಿದಾರ ಮಹಿಳೆ ಸೆಲ್ವರಾಣಿ ಕ್ರೈಸ್ತ ರಿಲಿಜನ್ ಪ್ರತಿಪಾದಿಸುತ್ತಾರೆ ಮತ್ತು ಚರ್ಚ್‌ಗೆ ಹಾಜರಾಗುವ ಮೂಲಕ ರಿಲಿಜನ್ ಮೇಲಿನ ನಂಬಿಕೆ ಮುಂದುವರಿಸಿದ್ದಾರೆ ಎನ್ನುವುದು ನಮ್ಮ ಮುಂದಿರುವ ಸಾಕ್ಷ್ಯಗಳಿಂದ ಸ್ಪಷ್ಟವಾಗುತ್ತದೆ. ಹೀಗಿದ್ದರೂ, ಮಹಿಳೆ ತನ್ನನ್ನು ಹಿಂದು ಎಂದು ಹೇಳಿಕೊಳ್ಳುತ್ತಿದ್ದಾರೆ. ಉದ್ಯೋಗಕ್ಕಾಗಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆಯುವ ಉದ್ದೇಶ ಹೊಂದಿದ್ದಾರೆ. ಆದರೆ, ಇಂತಹ ದ್ವಂದ್ವದ ಹಕ್ಕು ಪ್ರತಿಪಾದನೆ ಸಮರ್ಥನೀಯವಲ್ಲ ಎಂದು ಹೇಳಿತು.

ಕೋರ್ಟ್ ಹೇಳಿದ್ದೇನು? ಭಾರತ ಜಾತ್ಯತೀತ ದೇಶ. ಸಂವಿಧಾನದ 25ನೇ ಪರಿಚ್ಛೇದದಡಿ ಖಾತರಿಪಡಿಸಿದಂತೆ ಪ್ರತಿ ಪ್ರಜೆಗೂ ತಮ್ಮ ಆಯ್ಕೆಯ ಧರ್ಮ ಆಚರಿಸಲು ಹಕ್ಕಿದೆ. ಧರ್ಮದ ತತ್ವ – ಆಧ್ಯಾತ್ಮಿಕ ಚಿಂತನೆಗಳಿಂದ ನಿಜವಾದ ಸ್ಫೂರ್ತಿ ಪಡೆದ ವ್ಯಕ್ತಿ/ಮಹಿಳೆ ಬೇರೆ ಧರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಅದಾಗ್ಯೂ, ಮತಾಂತರದ ಉದ್ದೇಶ ಬಹುಮಟ್ಟಿಗೆ ಮೀಸಲಾತಿಯ ಪ್ರಯೋಜನಗಳನ್ನು ಪಡೆಯುವುದಾಗಿದ್ದರೆ ಅದನ್ನು ಅನುಮತಿಸಲಾಗದು.

## ಯುದ್ಧಭೂಮಿಗಳನ್ನು ಪ್ರವಾಸಿಗರು ವೀಕ್ಷಿಸಬಹುದು: ಉಪೇಂದ್ರ ದ್ವಿವೇದಿ



ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತೀಯ ಸೇನೆಯು ಭಯೋತ್ಪಾದನೆಯನ್ನು ಅಳಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಗುರಿ ಹೊಂದಿದೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ. ಸಾವಿತ್ರಿಬಾಯಿ ಫುಲೆ ಪುಣೆ ವಿಶ್ವವಿದ್ಯಾನಿಲಯದಲ್ಲಿ (SPPU) "ಭಾರತದ ಬೆಳವಣಿಗೆಯ ಕಥೆಯನ್ನು ಭದ್ರಪಡಿಸುವಲ್ಲಿ ಭಾರತೀಯ ಸೇನೆಯ ಪಾತ್ರ ಮತ್ತು ಕೊಡುಗೆ" ಎಂಬ ವಿಷಯದ ಕುರಿತು ಮಾತನಾಡಿದ ಅವರು ಗಡಿಗಳು ಮಾತ್ರವಲ್ಲದೇ ರಾಷ್ಟ್ರೀಯ ಅಭಿವೃದ್ಧಿ, ಭದ್ರತೆ ಮತ್ತು ಕಾರ್ಯತಂತ್ರದ ಬೆಳವಣಿಗೆಗೂ ಸೇನೆ ಕೊಡುಗೆ ನೀಡುತ್ತದೆ. ಅಲ್ಲದೆ, ಭಾರತೀಯ ಸೇನೆಯು ಕಾರ್ಗಿಲ್ ಮತ್ತು ಗಾಲ್ವಾನ್ ಸೇರಿದಂತೆ ಇತರ ಯುದ್ಧಭೂಮಿಗಳನ್ನು ಪ್ರವಾಸಿಗರಿಗೆ ಮುಕ್ತವಾಗಿ ತೆರೆಯಲಿದ್ದೇವೆ ಮತ್ತು ಅಂತಹ ಯುದ್ಧಭೂಮಿಗಳ ಮೊದಲ ಅನುಭವವನ್ನು ಪಡೆಯಲು ಮತ್ತು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಸೈನಿಕರ ಬಗ್ಗೆ ಸಹಾನುಭೂತಿ ಹೊಂದಲು ಇದು ಜನರಿಗೆ ಅವಕಾಶ ನೀಡುತ್ತದೆ ಎಂದಿದ್ದಾರೆ.

ನಾವು ಪ್ರವಾಸೋದ್ಯಮದ ದೃಷ್ಟಿಯಿಂದ 48 ಪ್ರದೇಶಗಳನ್ನು ಗುರುತಿಸಿದ್ದೇವೆ ಮತ್ತು ಗಡಿ ಪ್ರದೇಶಗಳಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಆಲೋಚನೆಗಳನ್ನು ಮಾಡಲಾಗಿದೆ. ಉದ್ದೇಶಿತ ಉಪಕ್ರಮದೊಂದಿಗೆ, ಮುಂದಿನ ಐದು ವರ್ಷಗಳಲ್ಲಿ ನಮ್ಮ ಪ್ರವಾಸಿಗರ ಸಂಖ್ಯೆಯನ್ನು ದ್ವಿಗುಣಗೊಳಿಸುವ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ. ನಾವು ಸಾಹಸ ಚಟುವಟಿಕೆಗಳನ್ನು ಉತ್ತೇಜಿಸಲು ಮತ್ತು ಸಂಘಟಕರು ಮತ್ತು ಪ್ರವಾಸಿ ನಿರ್ವಾಹಕರಿಗೆ ಬೆಂಬಲವನ್ನು ನೀಡಲು ಬದ್ಧರಾಗಿದ್ದೇವೆ. ಗಡಿ ಪ್ರದೇಶದಲ್ಲಿ ಹೆಜ್ಜೆಗಳನ್ನು ಹೆಚ್ಚಿಸಲು, ಪರ್ವತಾರೋಹಣ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ಸ್ಥಳೀಯರನ್ನು ಹೆಚ್ಚಿಸುವುದು ಅದರ ಭಾಗವಾಗಿದೆ" ಎಂದರು.

## ಮೊದಲ ಬಾರಿಗೆ 'ಸಂವಿಧಾನ್ ದಿವಸ್' ಆಚರಿಸಿದ ಜಮ್ಮು-ಕಾಶ್ಮೀರ



ದೇಶದ ಸಂವಿಧಾನವನ್ನು ಸಂಸತ್ತು ಅಂಗೀಕರಿಸಿದ 1950ರ ನಂತರ ಮೊದಲ ಬಾರಿಗೆ ಜಮ್ಮು ಮತ್ತು ಕಾಶ್ಮೀರವು ಈ ಬಾರಿ 'ಸಂವಿಧಾನ್ ದಿವಸ್' ಅನ್ನು ಆಚರಿಸಿದೆ. ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಜಮ್ಮು ಮತ್ತು ಕಾಶ್ಮೀರದಲ್ಲಿ ಸಂವಿಧಾನ ದಿನಾಚರಣೆಯ ನೇತೃತ್ವ ವಹಿಸಿದ್ದರು. ಮುಖ್ಯ ಕಾರ್ಯಕ್ರಮವು ಶ್ರೀನಗರದ ಶೇರ್-ಎ-ಕಾಶ್ಮೀರ್ ಇಂಟರ್ನ್ಯಾಷನಲ್ ಕನ್ವೆನ್ಷನ್ ಸೆಂಟರ್ (SKICC) ನಲ್ಲಿ ಸಂವಿಧಾನದ ಪೀಠಿಕೆ ಓದುವ ಸಮಾರಂಭದೊಂದಿಗೆ ಆರಂಭವಾಯಿತು. ಇದೇ ರೀತಿಯ ಸಮಾರಂಭಗಳನ್ನು ಜಮ್ಮು ಮತ್ತು ಕಾಶ್ಮೀರದಾದ್ಯಂತ ಸರ್ಕಾರಿ ಕಚೇರಿಗಳು, ಪಿಎಸ್‌ಯುಗಳು, ಶಿಕ್ಷಣ ಸಂಸ್ಥೆಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲಾಗಿದೆ. ಜಮ್ಮು-ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್ ಮುನ್ನುಡಿಯನ್ನು ಓದಲು ಆದೇಶಿಸಿತ್ತು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.